# ಸಕಲ ದುರಿತಗಳ ಪರಿಹಾರ ಮಾಡಿದ್ಯೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 543.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 275.
3. **Ref.**: Sri Purandara Dasara Krutigalu – Sri Gorebala Hanumantha Rayara Hasta Prati Sangrahadinda – Published by Sri Varadendra Haridasa Sahitya Mandala, Lingasuguru, Raichur Dist., Karnataka (2013), page No. 51.
4. **Note:** Lyrics in Ref. 1 & Ref. 2 are fully matching.  Singer has followed these wordings.
5. **Note:** Lyrics in Ref. 3 are slightly different and are not considered here.
6. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru.

ರಾಗ: ಸೌರಾಷ್ಟ್ರ                    ತಾಳ: ಅಟ

ಸಕಲ ದುರಿತಗಳ ಪರಿಹಾರ ಮಾಡಿದ್ಯೊ ವೆಂಕಟೇಶ     || ಪ ||
ಭಕುತಿಗೊಲಿದು ಬಂದು ಭಕ್ತರ ಕಾಯ್ದೆಯೊ ವೆಂಕಟೇಶ     || ಅಪ ||

ಮತ್ಸ್ಯಾವತಾರದಿ ನಾಲ್ಕು ವೇದವ ತಂದ್ಯೊ ವೆಂಕಟೇಶ
ಪೃಥ್ವೀಧರವ ಪೊತ್ತು ಭೃತ್ಯರ ನೀ ಕಾಯ್ದ್ಯೊ ವೆಂಕಟೇಶ     || 1 ||

ಧರೆಯನೊಯ್ದನ ಕೋರೆದಾಡೆಯಿಂದಲಿ ಕೊಂದ್ಯೋ ವೆಂಕಟೇಶ
ತರಳಗೊಲಿದು ನೀ ಕಂಭದಿಂದಲಿ ಬಂದ್ಯೊ ವೆಂಕಟೇಶ     || 2 ||

ಭೂಮಿ ದಾನವ ನೀಡಿದವನ ಬಾಗಿಲ ಕಾಯ್ದ್ಯೊ ವೆಂಕಟೇಶ
ಭೂಮಿ ಪಾಲರನಳಿದು ಭಾರ್ಗವನೆನಿಸಿದ್ಯೊ ವೆಂಕಟೇಶ     || 3 ||

ದಶಶಿರನನು ಕುಟ್ಟಿ ಶಶಿಮುಖಿಯಳ ತಂದ್ಯೋ ವೆಂಕಟೇಶ
ಅಸುರೆಯ ಸಂಹರಿಸಿ ಕಂಸನ ಮಡುಹಿದ್ಯೋ ವೆಂಕಟೇಶ || 4 ||

ಅಧಮ ಜನರಿಗೆ ಬೋಧಿಸಿ ಬತ್ತಲೆ ನಿಂತ್ಯೋ ವೇಂಕಟೇಶ
ಕುದುರೆಯೇರಿ ಕಲ್ಕಿ ರೂಪವ ತಾಳ್ದ್ಯೋ ವೆಂಕಟೇಶ || 5 ||

ಹರಿದಾಸರ ಮೇಲೆ ಒಲಿದು ಬೇಗನೆ ಬಂದ್ಯೋ ವೆಂಕಟೇಶ
ವರದ ಪುರಂದರ ವಿಠಲ ನಮೋ ನಮೋ ವೆಂಕಟೇಶ || 6 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ಇಲ್ಲಿ ದಶಾವತಾರದ ಒಕ್ಕಣೆಯಿದೆ.

**ಪೃಥ್ವೀಧರವ** – ಬೆಟ್ಟವನ್ನು, ಮಂದರಪರ್ವತವನ್ನು (ಕೂರ್ಮಾವತಾರದಲ್ಲಿ).

**ಧರೆಯನೊಯ್ದನ...** (ವರಾಹಾವತಾರದಲ್ಲಿ).

**ತರಳಗೊಲಿದು...**– (ನರಸಿಂಹಾವತಾರದಲ್ಲಿ).

**ಭೂಮಿದಾನವ...** – (ವಾಮನಾವತಾರದಲ್ಲಿ).

**ಭೂಮಿಪಾಲರ...** – (ಪರಶುರಾಮಾವತಾರದಲ್ಲಿ).

**ದಶಶಿರನನು...** – (ರಾಮಾವತಾರದಲ್ಲಿ).

**ಅಸುರೆಯ...** – ಪೂತನಿಯನ್ನು (ಕೃಷ್ಣಾವತಾರದಲ್ಲಿ).

**ಅಧಮಜನರಿಗೆ...** – (ಬೌದ್ಧಾವತಾರದಲ್ಲಿ).

**Classification:** Keerthane
**Ankita:** varada purandara vittala
**Location:** Tirupati
**Category:** Srinivasa Stuti, Dashavatara

**Sub-Category:** srinivasa, hari sarvottama, dashavatara, bhumi, veda, asura, kamsa, Krishna, kudure,

**Pravachana:** NA

**Explanation:** NA